**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.68/2020**

**ಚಾಸಾ-1/ಪಿಡಬ್ಲೂ-1**

| | |
|---|---|
| **ಹೆಸರು** | ವಿರುಪಾಕ್ಷಪ್ಪ |
| **ತಂದೆ ಹೆಸರು** | ಶಂಕ್ರೆಪ್ಪ |
| **ವಯಸ್ಸು** | 67 ವರ್ಷಗಳು |
| **ಉದ್ಯೋಗ** | ನಿವೃತ್ತ ಎಎಸ್ಐ |
| **ವಾಸ ಸ್ಥಳ** | ಜೇವರ್ಗಿ |

**ದಿನಾಂಕ 13.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭೀಯೋಜಕರಿಂದ.**

2018 ರಿಂದ ದಿನಾಂಕ 30.07.2019 ರವರೆಗೆ ನೆಲೋಗಿ ಪೊಲೀಸ ಠಾಣೆಯಲ್ಲಿ ಎ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 15.07.2019 ರಂದು ರಾತ್ರಿ 8.30 ಗಂಟೆಗೆ ನಾನು ಠಾಣೆಯಲ್ಲಿದ್ದಾಗ ಜಿಲ್ಲಾ ನಿಶ್ಯಂತು ಶಾಖೆ ಕಲಬುರಗಿಯಿಂದ ನನಗೆ ಮಾಹಿತಿ ಬಂದಿದ್ದೇನೆಂದರೆ ನೆಲೋಗಿ ನಾಗರಾಣಿ ಬ್ರಿಜ್ ಹತ್ತಿರ ಭೀಮಾನದಿಯಿಂದ ಕೆಲವು ಜನರು ಮರಳನ್ನು ತುಂಬುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿಯನ್ನು ಬಂದೋಬಸ್ತ ಕರ್ತವ್ಯದಲ್ಲಿದ್ದ ಪಿ ಎಸ್ ಐ ರವರಿಗೆ ತಿಳಿಸಿದ್ದು ಅವರು ನನಗೆ ದಾಳಿ ಮಾಡಲು ತಿಳಿಸಿದ ಮೇರೆಗೆ ಚಾಸಾ-2 ಮತ್ತು 3 ರವರನು ಬರಮಾಡಿಕೊಂಡು, ನಾನು, ಚಾಸಾ-2 ರಿಂದ 6 ರಾತ್ರಿ 8.45 ಗಂಟೆಗೆ ಘಟನಾ ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಎರಡು ಟ್ರ್ಯಾಕ್ಟರಗಳಲ್ಲಿ ಮರಳು ತುಂಬಿಕೊಂಡು ಬರುತ್ತಿದ್ದವು ನಮ್ಮ ಜೀಪನ್ನು ನೋಡಿ ಟ್ರ್ಯಾಕ್ಟರಗಳನ್ನು ಅಲ್ಲೆ ಬಿಟ್ಟು ಓಡಿ ಹೋದರು. ಅವುಗಳಲ್ಲಿ ಮರಳು ತುಂಬಿತ್ತು. ಒಂದು ನೀಲಿ ಬಣ್ಣದ ಸ್ವರಾಜ ಮತ್ತು ಸೋನಾಲಿಕ ಟ್ರ್ಯಾಕ್ಟರ ಮತ್ತು ಟ್ರಾಲಿಗಳು ಇದ್ದವು. ಘಟನೆಯಾಗಿ 8-ವರ್ಷಗಳಾಗಿರುವುದರಂದ ಟ್ರ್ಯಾಕ್ಟರಗಳ ನಂಬರ ನನಗೆ ನೆನಪಿಲ್ಲ. ಸದರಿ ಟ್ರ್ಯಾಕ್ಟರಗಳನ್ನು ರಾತ್ರಿ 9.10 ರಿಂದ 10.40 ಗಂಟೆವರೆಗೆ ಪಂಚರ ಸಮಕ್ಷಮ ಪಂಚನಾಮೆ ಜರುಗಿಸಿ ವಶಪಡಿಸಿಕೊಳ್ಳಲಾಯಿತು. ನಂತರ ಠಾಣೆಗೆ ಬಂದು ಎಸ್.ಹೆಚ್.ಓ. ರವರಿಗೆ ವರದಿ, ಪಂಚನಾಮೆ ಮತ್ತು ಮುದ್ದೆ ಮಾಲನ್ನು ಮುಂದಿನ ಕ್ರಮಕ್ಕಾಗಿ ನೀಡಲಾಯಿತು. ಈಗ ನಾನು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯ ವರದಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ನಾನು 08 ಪೋಟೋಗಳನ್ನು ನೋಡುತ್ತಿದ್ದು ಅವುಗಳಲ್ಲಿ ಕಾಣುತ್ತಿರುವ

ಟ್ರಾಕ್ಟರಗಳನ್ನು ಆ ದಿನ ನಾವು ವಶಪಡಿಸಿಕೊಂಡೆವು. ಸದರಿ ಫೋಟೋಗಳನ್ನು ನಿಪಿ-3 ರಿಂದ 10 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಸ.ಸ.ಅರವರು ಅನುಮತಿಯನ್ನು ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಗುನ್ನೆಗೆ ಬಳಸಿದ ಟ್ರ್ಯಾಕ್ಟರ ನಂ.ಕೆಎ-32/ಟಿಬಿ-3358 ಟ್ರಾಲಿ ನಂ.ಕೆಎ-32/ಟಿಬಿ-3359 ಮತ್ತು ಟ್ರ್ಯಾಕ್ಟರ ನಂ.ಕೆಎ-32/ಟಿಬಿ-7766 ಟ್ರಾಲಿ ನಂ.ಕೆಎ-32/ಟಿಬಿ-7767 ಎಂದರೆ ಸರಿ.

ಪಾಟೀ ಸವಾಲುಃ 1ಮತ್ತು 2ನೆ ಆರೋಪಿತರ ಪರ ವಕೀಲರಿಂದ

ಪಂಚರು ಠಾಣೆಗೆ ರಾತ್ರಿ 8.35 ಗಂಟೆಗೆ ಬಂದಿರುತ್ತಾರೆ. ಘಟನೆ ರಾತ್ರಿಯಾಗಿರುವುದರಿಂದ ಟ್ರ್ಯಾಕ್ಟರಗಳು ಸರಿಯಾಗಿ ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ನಾವು ಟ್ರ್ಯಾಕ್ಟರಗಳನ್ನು 100 ಫೂಟು ಅಂತರದಲ್ಲಿ ನೋಡಿರುತ್ತೇವೆ. ಮರಳು ತುಂಬಲು ಉಯೋಗಿಸಿದ ಸನಿಕೆ ಮತ್ತು ಸಲಕರಣೆಗಳನ್ನು ನಾನು ವಶಪಡಿಸಿಕೊಂಡಿಲ್ಲ. ಆರೋಪಿಗಳನ್ನು ಹಿಡಿಯಲು ಪ್ರಯತ್ನಿಸಿದೆವು ಆದರೆ ಅವರು ಸಿಗಲಿಲ್ಲ. ಎರಡೂ ಟ್ರ್ಯಾಕ್ಟರಗಳನ್ನು ನಮ್ಮ ಸಿಬ್ಬಂದಿಯವರು ಠಾಣೆಗೆ ತಂದಿರುತ್ತಾರೆ. ಈ ಕುರಿತು ನನ್ನ ಫಿರ್ಯಾದಿಯಲ್ಲಿ ನಮೂದಿಸಿಲ್ಲ. ಪಂಚನಾಮೆಯ ಲೈಟಿನ ಸಹಾಯದಿಂದ ಬರೆದಿರುತ್ತೇನೆ.

ನಾವು ಪಂಚರನ್ನು ಕರೆದುಕೊಂಡು ಹೋಗಿ ದಾಳಿ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ನಾವು ಸ್ಥಳದಲ್ಲಿ ಪಂಚನಾಮೆ ಜರುಗಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಆರೋಪಿತರಿಗೂ ಈ ಪ್ರಕರಣಕ್ಕೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಫಿರ್ಯಾಧಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1ನೆ ಆರೋಪಿ ಪರ ವಕೀಲರು 1ಮತ್ತು 2ನೆ ಆರೋಪಿತರ ಪರ ವಕೀಲರು ಮಾಡಿದ ಪಾಟಿ ಸವಾಲನ್ನು ಅಳವಡಿಸಲು ವಿನಂತಿಸಿದ್ದು ಅಳವಡಿಸಿಕೊಳ್ಳಲಾಯಿತು.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ